## ದೀಡೆಕರೆ ಜಮೀನು




**ಗ್ರಾಮೀಣ** ವಿವರಗಳ ಸಮೃದ್ಧಿ ಹಾಗೂ ಉತ್ತರ ಕರ್ನಾಟಕದ ಭಾಷೆಯ ಸೊಗಡಿನ ಹದದ ಕಾರಣಕ್ಕೆ ಮಲ್ಲಿಕಾರ್ಜುನ ಶೆಲ್ಲಿಕೇರಿ ಅವರ 'ದೀಡೆಕರೆ ಜಮೀನು' ಸಂಕಲನದ ಕಥೆಗಳು ಗಮನಸೆಳೆಯುತ್ತವೆ. ಮಲ್ಲಿಕಾರ್ಜುನರು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಯಂಡಿಗೇರಿಯವರು. 'ದೀಡೆಕರೆ ಜಮೀನು' ಅವರ ಚೊಚ್ಚಿಲ ಕಥಾಸಂಕಲನ.

'ದೀಡೆಕರೆ ಜಮೀನು' ಸಂಕಲನದ ಕಥೆಗಳ ಕೇಂದ್ರದಲ್ಲಿರುವುದು ರೈತರು, ಮಹಿಳೆಯರು ಹಾಗೂ ಜನಸಾಮಾನ್ಯರು. ವರ್ತಮಾನದ ಸಣ್ಣ ಕಂಪನಕ್ಕೂ ತಲ್ಲಣಿಸಿ ಹೋಗುವ ಬದುಕುಗಳನ್ನು ಕಥೆಗಾರರು ಆಸ್ಥೆಯಿಂದ, ಪ್ರಾಮಾಣಿಕತೆಯಿಂದ ಚಿತ್ರಿಸಿದ್ದಾರೆ. ತೀವ್ರವಾದ ಸಂಕಟವನ್ನು ಚಿತ್ರಿಸುವ ಸಂದರ್ಭದಲ್ಲೂ ಕಥೆಗಾರರು ತಕ್ಕಮಟ್ಟಿಗೆ ಸಂಯಮ ಕಳೆದುಕೊಳ್ಳದಿರುವುದು ವಿಶೇಷ. ಮೌಲ್ಯಪ್ರಧಾನ ವ್ಯವಸ್ಥೆಯ ಕಾಳಜಿ ಕಥೆಗಳಲ್ಲಿ ಕಣ್ಣಿಗೆ ಕಟ್ಟುವಂತಿದೆ. ಮನುಷ್ಯನ ಕ್ರೌರ್ಯದ ವಿವಿಧ ಆಯಾಮಗಳನ್ನು ಕಥೆಗಳು ಚಿತ್ರಿಸುತ್ತವೆ. ಕಥೆಗಳ ಕಲಾತ್ಮಕ ಸಾಧ್ಯತೆ, ಕಥೆಗಾರನೊಬ್ಬ ನಿರಂತರವಾಗಿ ನಡೆಯುತ್ತಲೇ ಇರಬೇಕಾದ ಹಾದಿ ಎನ್ನುವುದನ್ನೂ ಈ ಕಥೆಗಳು ಸೂಚಿಸುವಂತಿವೆ.

ಲೇ: ಮಲ್ಲಿಕಾರ್ಜುನ ಶೆಲ್ಲಿಕೇರಿ; ಪು: 166; ಬೆ: ₹ 150; ಪ್ರ: ಕಾಚಕ್ಕಿ ಪ್ರಕಾಶನ, ಕುಣಿಗಲ್.
ಫೋನ್: 8660788450.

---

## ಸುಮ್ ಸುಮ್ನೆ ನಗ್ತಿದೆ ಪಾಪು




ಕನ್ನಡ ಸಾಹಿತ್ಯದ ಈ ಹೊತ್ತಿನ ಪ್ರಸಿದ್ಧರು ನಿರ್ಲಕ್ಷಿಸಿದ ಮಕ್ಕಳ ಸಾಹಿತ್ಯವನ್ನು ಹೆಗಲಿಗೇರಿಸಿಕೊಂಡಿರುವ ಶಿಕ್ಷಕ ಪರಂಪರೆಗೆ ಸೇರಿದ ಜಂಬುನಾಥ ಕಂಚ್ಯಾಣಿ ಅವರ ಕೃತಿ 'ಸುಮ್ ಸುಮ್ನೆ ನಗ್ತಿದೆ ಪಾಪು'. ಈ ಸಂಕಲನದ ಕವಿತೆಗಳು ಮಕ್ಕಳ ಮನಸ್ಸಿಗೆ ಮುದ ಕೊಡುವಂತಿವೆ.

ಕಳೆದುಹೋದ ಕಾಲದ ನೆನಪುಗಳೊಂದಿಗೆ ವರ್ತಮಾನದ ಚಿತ್ರಗಳನ್ನೂ ಮಕ್ಕಳಿಗೆ ಮುಟ್ಟಿಸುವ ಪ್ರಯತ್ನ ಇಲ್ಲಿನ ಕವಿತೆಗಳಲ್ಲಿದೆ. ಕ್ರಿಕೆಟ್‌ನ ಅಬ್ಬರದಲ್ಲಿ ದೇಸಿ ಆಟಗಳು ಮೂಲೆಗುಂಪಾದ ವಿಷಾದ ಇಲ್ಲಿ ಪದ್ಯವಾಗಿದೆ. 'ಗಿಡ ಮರಗಳನ್ನು ಕಡಿ ಕಡಿದು ಮತ್ತೆ ಮಳೆಗಾಗಿ ಅಳುವುದೇತಕೆ' ಎನ್ನುವ ವಿವೇಕ ಇಲ್ಲಿದೆ. ಮಕ್ಕಳ ಮನಸ್ಸನ್ನು ಅರಳಿಸುವಂತಹ ಸುಂದರ ಕಲ್ಪನೆಗಳು ಗಮನಸೆಳೆಯುತ್ತವೆ. ಸೂರ್ಯ, ಚಂದ್ರ, ಹೂವು, ಕೋತಿ – ಹೀಗೆ ಪ್ರಕೃತಿಯೇ ಮಕ್ಕಳಿಗೆ ಪಾಠಶಾಲೆಯೂ ಪದ್ಯಶಾಲೆಯೂ ಆಗಿದೆ.

'ಸುಮ್ ಸುಮ್ನೆ ನಗ್ತಿದೆ ಪಾಪು/ ಕಚಗುಳಿ ಇಟ್ಟಿಲ್ಲ/ ಕನಸೇನಾದರೂ ಬಿದ್ದಿರಬೇಕು/ ಕಾರಣ ತಿಳಿದಿಲ್ಲ' ಎಂದು ಸರಳವಾಗಿ ಸಹಜವಾಗಿ ಜಂಬುನಾಥರು ಬರೆಯಬಲ್ಲರು. ನೀತಿಪಾಠದ ಹಂಬಲ ಹಿಂದೆ ಸರಿದು, ಮನೋವಿಕಾಸದ ಬಯಕೆ ಮುನ್ನೆಲೆಯಲ್ಲಿರುವುದು ಈ ಕವಿತೆಗಳ ವಿಶೇಷ. ಸಂತೋಷ್ ಸಸಿಹಿತ್ಲು ಅವರ ಚೆಲುವಾದ ಚಿತ್ರಗಳು ಜಂಬುನಾಥರ ಕವಿತೆಗಳ ಚೆಲುವನ್ನು ಹೆಚ್ಚಿಸಿವೆ.

ಲೇ: ಜಂಬುನಾಥ ಕಂಚ್ಯಾಣಿ; ಪು: 109; ಬೆ: ₹ 125; ಪ್ರ: ಮಾನ್ಯತಾ ಪ್ರಕಾಶನ, ವಿಜಯಪುರ.
ಫೋನ್: 9901111734.